# ಪಾಸು-ಫೇಲು! ಮುಂದೇನು ಬಾಳು?



**ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳು ಕಣ್ಣತುಂಬಾ ನಿರೀಕ್ಷೆಗಳನ್ನೂ ಹೊಸ ಕನಸುಗಳ ಒತ್ತಡವನ್ನೂ ತುಂಬಿಕೊಂಡಿರುವಾಗ, ಈ ಬರಹ ಮನಸ್ಸನ್ನು ಪ್ರಫುಲ್ಲಗೊಳಿಸುವಂತಿದೆ. ವಿನೋದದ ನೆಲೆಗಟ್ಟಿನಲ್ಲಿಯೇ ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಗಂಭೀರ ಬದಲಾವಣೆಗಳತ್ತ ಗಮನಸೆಳೆಯುವಂತಿದೆ.**

**■ ಎಚ್.ಎಸ್. ಸತ್ಯನಾರಾಯಣ**

ಕೊರೊನಾ ಕಾಲದಲ್ಲಿ ಏನೆಲ್ಲಾ ಬದಲಾವಣೆಗಳು ನಡೆದವು. ಅದರಲ್ಲೂ ನಮ್ಮ ಶಿಕ್ಷಣ ಕ್ಷೇತ್ರದಲ್ಲಾದ ಪಲ್ಲಟಗಳು ಲೆಕ್ಕವಿಲ್ಲದಷ್ಟು. ಮನೆಯಲ್ಲೇ ಕೂತು ಕೂತು ತರಗತಿಗಳ ಸಂಪರ್ಕದಿಂದ ದೂರಾದ ಮಕ್ಕಳಲ್ಲಿ ಶಾಲೆ, ಶಿಕ್ಷಕರು, ಗೆಳೆಯ ಗೆಳತಿಯರ ಜೊತೆಗೆ ದೊಡ್ಡ ಮಾನಸಿಕ ಕಂದಕವೇರ್ಪಟ್ಟಿದೆ. ನಮ್ಮ ಪಕ್ಕದ ಮನೆಯ ರಯಾನ್ ಎಂಬ ಮಗು ತುಂಬಾ ದಿನಗಳ ರಜೆಯ ಬಳಿಕ ಮೂರನೇ ಕ್ಲಾಸಿಗೆ ಹೋದವನು ಮನೆಗೆ ಬಂದು 'ನನ್ನ ಕ್ಲೋಸ್ ಫ್ರೆಂಡಿಗೆ ನನ್ನ ಗುರುತೇ ಸಿಗಲಿಲ್ಲ, ನನ್ನಿಂದ ದೂರ ಉಳಿದ' ಅಂತ ಸಪ್ಪೆಮುಖ ಮಾಡಿಕೊಂಡು ಹೇಳಿದಾಗ ಸಂಕಟವಾಯಿತು. ಇಂಥ ಅಪಸವ್ಯಗಳ ಜೊತೆಗೆ ಕೂತು ಪಾಠ ಕೇಳುವುದು, ಟಿಪ್ಪಣಿ ಬರೆದುಕೊಳ್ಳುವುದು, ಓದುವುದು, ಬರೆಯುವುದು, ಪರೀಕ್ಷೆಗೆ ತಯಾರಿ ನಡೆಸುವುದೆಲ್ಲಾ ಬದಿಗಿರಲಿ, ವಿದ್ಯಾರ್ಥಿಗಳ ವರ್ತನೆಯ ಸಮಸ್ಯೆ ಮುಖ್ಯವಾಗಿದೆ. ಎರಡು ವರ್ಷದಲ್ಲಿ ಇಷ್ಟು ವರ್ಷದ ಶಿಕ್ಷಣ ವ್ಯವಸ್ಥೆ ಕಲಿಸಿದ್ದ ಅನೇಕ ಮೌಲ್ಯಗಳನ್ನು ಕೊರೊನಾ ನುಂಗಿಹಾಕಿದೆ. ಮಕ್ಕಳ ವರ್ತನೆಯಿಂದ ಮನೆಯಲ್ಲೂ ಪೋಷಕರು ಕಳವಳದಲ್ಲಿ ಕಾಲ ಹಾಕುವಂತಾಗಿದೆ. ಮೌಲ್ಯಗಳ ಅಧಃಪತನ ಬಹಳ ದೊಡ್ಡ ಬಿಕ್ಕಟ್ಟನ್ನು ಜಾಗತಿಕ ಮಟ್ಟದಲ್ಲಿ ಸೃಷ್ಟಿ ಮಾಡಿರುವುದು ಸುಳ್ಳಲ್ಲ.

ವಿದ್ಯಾರ್ಥಿಗಳಿಗೆ ಎರಡು ವರ್ಷಗಳಿಂದ ಮೊಬೈಲ್ ಮೇನಿಯಾದ ಸೋಂಕು ಹೆಚ್ಚು ತಗುಲಿರುವ ಪರಿಣಾಮ ಯಾವುದರ ಬೆಲೆಯೂ ತಿಳಿಯದ ಎಡಬಿಡಂಗಿ ಸ್ಥಿತಿಯಲ್ಲಿರುವ ಬಹುತೇಕ ವಿದ್ಯಾರ್ಥಿಗಳಿಗೆ ಪಾಠಮಾಡುವುದು, ಬುದ್ದಿ ಹೇಳುವುದು ಅಧ್ಯಾಪಕರಾದವರಿಗೆ ದೊಡ್ಡ ಸವಾಲಾಗಿದೆ. ಕೆಲವು ಶಿಕ್ಷಕರಿಗೂ ಯಾವುದರ ಬಗ್ಗೆಯೂ ಆಸಕ್ತಿಯಿಲ್ಲದ ಜಡತ್ವ, ಸೋಮಾರಿತನ ಆವರಿಸಿರುವುದೂ ಮುಖ್ಯ ಕಾರಣವೇ. ಎಲ್ಲರ ಸ್ಥಿತಿಯೂ ಹೀಗೇನಿಲ್ಲ, ಇದಕ್ಕೆ ಅಪವಾದವೆಂಬಂತೆ ಕೆಲವರಾದರೂ ವಿದ್ಯಾರ್ಥಿಗಳು ಮತ್ತು ಬದ್ಧತೆಯುಳ್ಳ ಅಧ್ಯಾಪಕರೂ ನಮ್ಮ ನಡುವೆ ಇದ್ದಾರೆ. ಪರೀಕ್ಷೆ–ಫಲಿತಾಂಶಗಳ ಹೊಸ ಶೈಕ್ಷಣಿಕ ವರ್ಷದ ಹೊತ್ತಲ್ಲಿ ಇದೆಲ್ಲಾ ನೆನಪಾಯ್ತು.

ಬಹುತೇಕ ವಿದ್ಯಾರ್ಥಿಗಳು ಸುಡುಬಿಸಿಲಲ್ಲಿ ರಜೆ ಅನುಭವಿಸುತ್ತಾ ವಸಂತಾಗಮನದ ಸೊಬಗನ್ನು ಆಸ್ವಾದಿಸುತ್ತ, ನೆಂಟರ ಜೊತೆ ಕಾಲ ಕಳೆಯುವ, ಮುಂದಿನ ತರಗತಿಗೆ ಸೇರಲು ದುಡ್ಡು ಹೊಂದಿಸುತ್ತ, ಹೊಸ ಬದುಕಿನ ಕನಸುಗಳಿಗೆ ರೆಕ್ಕೆ ಕಟ್ಟುವ ಕಾಲವಿದು. ಹತ್ತನೇ ತರಗತಿಯ ಹಾಗೂ ದ್ವಿತೀಯ ಪಿಯುಸಿ ಮಕ್ಕಳು ಮುಂದೇನು ಎನ್ನುವ ನಿರೀಕ್ಷೆಯಲ್ಲಿದ್ದಾರೆ. ಕೊರೊನಾ ಕೃಪೆಯಿಂದ ಕಾಲೇಜಿಗೆ ಬಂದಿರುವ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ನೋಡಿದರೆ ಕಣ್ಣಲ್ಲಿ ನೀರು ಬರುತ್ತದೆ. ಇದಕ್ಕಿರುವ ಬಗೆಬಗೆಯ ಕಾರಣಗಳನ್ನು ಚರ್ಚೆ ಮಾಡಹೊರಟರೆ ಅದು ಬೆಟ್ಟದಷ್ಟಿದೆ!

ಇತ್ತೀಚೆಗೆ ಕಾಲೇಜಿಗೆ ಹೋಗುವಾಗ ಬಸ್ಸಲ್ಲಿ ಕೆಲವು ಪ್ರಾಥಮಿಕ ಶಾಲೆಯ ಮಕ್ಕಳನ್ನು ಮಾತಾಡಿಸಿ, ಪರೀಕ್ಷೆಯ ಬಗ್ಗೆ ವಿಚಾರಿಸಿ, 'ಫಲಿತಾಂಶ ಯಾವಾಗ?' ಎಂದರೆ, 'ಗೊತ್ತಿಲ್ಲ' ಎಂದರು. 'ಪಾಸಾಗ್ತೀರಾ?' ಎಂದರೆ ಆ ಪುಟಾಣಿಗಳು ಸುಮ್ಮನೆ ನಕ್ಕವು. 'ಯಾಕೆ, ಪಾಸಾಗೋದು ಡೌಟಾ?' ಎಂದು ಕೀಟಲೆ ಮಾಡಿದರೆ, 'ಒಂಬತ್ತನೇ ಕ್ಲಾಸ್ ತನಕ ಯಾರನ್ನೂ ಫೇಲ್ ಮಾಡಲ್ಲ' ಎಂದು ಒಂದು ಹುಡುಗಿ ನನ್ನ ಅಜ್ಞಾನಕ್ಕೆ ಕನಿಕರಿಸುವಂತೆ ನಿರಾಳಭಾವದಲ್ಲಿ ನುಡಿದಳು. ನಿರ್ಭಯ ವಾತಾವರಣದಲ್ಲಿ, ಸುಭದ್ರ ಭಾರತದಲ್ಲಿ ನಮ್ಮ ಮಕ್ಕಳು ಬದುಕಬೇಕು ನಿಜ, ಆದರೆ 'ಹೇಗೂ ಪಾಸ್ ಮಾಡ್ತಾರೆ' ಎಂಬ ಈ ಪರಿಯ ಉದಾಸೀನ ಮನೋಭಾವದಲ್ಲಿ ಬೆಳೆಸುತ್ತಿದ್ದೇವಲ್ಲಾ ಏನಪ್ಪಾ ಕಥೆ? ಎಂಬ ತಳಮಳ ಆವರಿಸಿತು.

> **ನೆನಪಿನ ನವಿಲುಗರಿ ಮತ್ತು ವರ್ತಮಾನದ ದಳ್ಳುರಿ**

ನೆನಪು ಮಾಡಿಕೊಳ್ಳಿ; ನಾವೆಲ್ಲಾ ಚಿಕ್ಕವರಿದ್ದಾಗ ರಿಸಲ್ಟ್ ದಿನ ಎಂದರೆ ನಿದ್ದೆಯೇ ಬರುತ್ತಿರಲಿಲ್ಲ. ನಾನು ಓದುತ್ತಿದ್ದುದು ಅಷ್ಟರಲ್ಲೇ ಇತ್ತು. ಹಾಗಾಗಿ ಯಾವ ಯಾವ ಸಬ್ಜೆಕ್ಟಲ್ಲಿ ಫೇಲಾಗಬಹುದು ಅಂತ ಕೇಳಿದರೆ, ನನ್ನ ಮನಸಲ್ಲಿ 'ಕನ್ನಡ ಬಿಟ್ಟು ಬೇರೆಲ್ಲ ವಿಷಯಗಳಲ್ಲೂ ಫೇಲೇ' ಎಂಬ ಉತ್ತರವಿರುತ್ತಿತ್ತಾದರೂ ಬಾಯಿಬಿಟ್ಟು ಹೇಳದೆ ಹುಳ್ಳಗೆ ನಕ್ಕು ಸುಮ್ಮನಾಗುತ್ತಿದ್ದೆ. ನಮ್ಮ ಕಡೆ ರಿಸಲ್ಟು, ಫಲಿತಾಂಶ ಮುಂತಾದ ಪದಗಳಿಗಿಂತ 'ಪಾಸು–ಫೇಲು ಯಾವಾಗಂತೆ?' ಎಂಬ ಮಾತೇ ಹೆಚ್ಚು ಚಾಲ್ತಿಯಲ್ಲಿತ್ತು. ಒಂದೋ ಪಾಸು, ಇಲ್ಲವೇ ಫೇಲು! ಬೇರಾವ ಆಯ್ಕೆ ಇರುತ್ತೆ ಚಿಕ್ಕಂದಿನಲ್ಲಿ. ಫಲಿತಾಂಶ ತಡೆಹಿಡಿಯುವಂತಹ ಪದಗಳನ್ನು ನಾವು ಡಿಗ್ರಿಗೆ ಬಂದ ಮೇಲೆಯೇ ಕೇಳಿದ್ದು.

ನಾಳೆ ಫಲಿತಾಂಶ ಎಂದರೆ ರಾತ್ರಿಯೆಲ್ಲ ನಿದ್ದೆಯಲ್ಲಿ ಕುಮುಟಿ ಬೀಳುತ್ತಿದ್ದ ನನ್ನ ಮನಸಿನ ಆತಂಕ ಯಾರಿಗೂ ಅರ್ಥವೇ ಆಗುತ್ತಿರಲಿಲ್ಲ. ಕಂಡ ಕಂಡ ದೇವರಿಗೆಲ್ಲಾ 'ಇದೊಂದು ಸಲ ಪಾಸ್ ಮಾಡಿಬಿಡಪ್ಪ, ಮುಂದಿನಸಲ ಚೆನ್ನಾಗಿ ಓದುವೆ' ಅಂತ ಅರ್ಜಿ ಗುಜರಾಯಿಸಿದ್ದೇ ಗುಜರಾಯಿಸಿದ್ದು. ಪಾಸ್ ಆದರೆ, ಈ ಅರ್ಜಿ ವಿಚಾರ ನೆನಪಿಗೇ ಬರುತ್ತಿರಲಿಲ್ಲ.

ಫಲಿತಾಂಶದ ದಿನ ಬೆಳಿಗ್ಗೆ ಎದ್ದು, ಸ್ನಾನ ಮುಗಿಸಿ, ಹಿತ್ತಲಲ್ಲಿ ಹೂ ಕೊಯ್ದು, ಎಲ್ಲ ದೇವರ ಪಟಕ್ಕೂ ಮುಡಿಸಿ, ಎಂದಿಲ್ಲದ ಭಕ್ತಿಯಿಂದ ಪ್ರಾರ್ಥನೆ

